**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 58 (90) |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12-09-2022 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಉಪನ್ಯಾಸಕರ ನೇಮಕಾತಿಗೆ ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಹೆಚ್ಚಿನ ಫಲಿತಾಂಶ ಇರುವುದು ಅವಶ್ಯಕತೆ ಇದೆಯೇ; | ಸರ್ಕಾರದ ಆದೇಶ ಸಂಖ್ಯೆ:ಇಡಿ 63 ಟಿಪಿಯು 2003 ದಿನಾಂಕ:07-05-2007, ಇಡಿ 59 ಪಿಎಂಸಿ 2006 ದಿನಾಂಕ:06-10-2007 ಮತ್ತು ಇಡಿ 217 ಪಿಎಂಸಿ 2008 ದಿನಾಂಕ:08-09-2008ರನ್ವಯ ಕಾಲೇಜನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿನ ಸಾಮಾನ್ಯ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಿಗೆ ಇರಬೇಕಾಗುತ್ತದೆ.<br><br>ಅಂತೆಯೇ ಸರ್ಕಾರದ ಆದೇಶ ಸಂಖ್ಯೆ: ಇಡಿ 16 ಟಿಪಿಯು 2011 ದಿನಾಂಕ:30-09-2011ರನ್ವಯ ನಿಧನ, ನಿವೃತ್ತಿ, ರಾಜೀನಾಮೆ ಹಾಗೂ ಇತ್ಯಾದಿ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಪರೀಕ್ಷಾ ಫಲಿತಾಂಶವು ಹಿಂದಿನ ವರ್ಷಗಳಲ್ಲಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಪೈಕಿ ಶೇಕಡ 40ರಷ್ಟು ಉತ್ತೀರ್ಣರಾಗಿರಬೇಕು. ಹಿಂದಿನ ವರ್ಷಗಳಲ್ಲಿ ಶೇಕಡ 40ಕ್ಕಿಂತ ಕಡಿಮೆ ಫಲಿತಾಂಶವಿದ್ದ ಪ್ರಕರಣಗಳಲ್ಲಿ, ಸಂಬಂಧಿಸಿದ ಸಂಸ್ಥೆ, ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಫಲಿತಾಂಶ ಗಳಿಸಿದ ನಂತರ, ಅನುದಾನಿತ ಹುದ್ದೆಗಳ ಎದುರು ಉಂಟಾದ ರಿಕ್ತ ಸ್ಥಾನಗಳನ್ನು ತುಂಬಲು ಅನುಮತಿ ಕೋರಬಹುದು ಎಂಬ ಮಾನದಂಡವನ್ನು ವಿಧಿಸಲಾಗಿದೆ. |
| ಆ) | ದೈಹಿಕ ಶಿಕ್ಷಣ ಉಪನ್ಯಾಸಕರಿಗೆ ಪಠ್ಯ ಪುಸ್ತಕಗಳು ವಿತರಣೆ ಆಗುತ್ತಿದೆಯೇ; ಎಷ್ಟು ವರ್ಷಗಳಿಂದ ಈ ಪಠ್ಯಕ್ರಮ ಪಾಲಿಸಲಾಗುತ್ತಿದೆ; | ದೈಹಿಕ ಶಿಕ್ಷಣ ಉಪನ್ಯಾಸಕರಿಗೆ ಪಠ್ಯ ಪುಸ್ತಕವನ್ನು ನಿಗಧಿಪಡಿಸಿರುವುದಿಲ್ಲ. |

| | | |
|---|---|---|
| ಇ) | ದೈಹಿಕ ಶಿಕ್ಷಣ ಉಪನ್ಯಾಸಕರ ನೇಮಕಾತಿ ಸಂದರ್ಭದಲ್ಲಿ ಅನಾವಶ್ಯಕವಾಗಿ ಜಿಲ್ಲಾವಾರು ಫಲಿತಾಂಶ ಕೇಳುತ್ತಿರುವುದು ಸರಿಯೇ; | ಮೇಲಿನ ಉತ್ತರದಿಂದಾಗಿ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ದೈಹಿಕ ಶಿಕ್ಷಣ ವಿಷಯವು ಪರೀಕ್ಷಾ ವಿಷಯವೇ; ಈ ವಿಷಯಕ್ಕಾಗಿ ಪ್ರತ್ಯೇಕ ಪರೀಕ್ಷೆ ನಡೆಸಲಾಗುತ್ತಿದೆಯೇ ಈ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷೆ ನಡೆಸುವ ಚಿಂತನೆ ಸರ್ಕಾರದ ಮುಂದಿದೆಯೇ; ಹಾಗಿದ್ದ ಸಂದರ್ಭದಲ್ಲಿ ಜಿಲ್ಲಾ ಸರಾಸರಿ ಫಲಿತಾಂಶ ಕೇಳುತ್ತಿರುವುದು ಸೂಕ್ತವೇ; ಸದರಿ ಕ್ರಮ ಕೈ ಬಿಡಲು ಸರ್ಕಾರ ಕ್ರಮವಹಿಸುವುದೇ? (ಸಂಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು) | ದೈಹಿಕ ಶಿಕ್ಷಣ ವಿಷಯವು ಪರೀಕ್ಷಾ ವಿಷಯ ಆಗಿರುವುದಿಲ್ಲ.<br><br>ದೈಹಿಕ ಶಿಕ್ಷಣ ವಿಷಯಕ್ಕೆ ಪ್ರತ್ಯೇಕ ಪರೀಕ್ಷೆ ನಡೆಸುವ ಹಾಗೂ ಜಿಲ್ಲಾ ಸರಾಸರಿ ಫಲಿತಾಂಶವನ್ನು ಕೈಬಿಡುವ ಕ್ರಮದ ಕುರಿತಂತೆ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ. |

**ಸಂಖ್ಯೆ: ಇಪಿ 178 ಡಿಜಿಡಬ್ಲ್ಯೂ 2022**

(ಬಿ.ಸಿ.ನಾಗೇಶ್)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು